ಸಿ ಸಿ ನಂ. **297/2022**

ಚಾಸಾ **1**ಪ್ರಾಸಾ **1**
ದಿನಾಂಕ **19.07.2023**

| | |
|---|---|
| ಸಾಕ್ಷಿದಾರರ ಹೆಸರು | ನವೀನಕುಮಾರ ನೀರಲಕೇರಿ |
| ತಂದೆಯ ಹೆಸರು | ಶಿವನಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಸಾಃ ಕೆರೂರ |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಚಾಸಾ 2 ರಿಂದ 7 ರವರ ಪರಿಚಯ ಇರುತ್ತದೆ. ಚಾಸಾ 8 ನನ್ನ ಅಣ್ಣ. ಚಾಸಾ 9 ನನ್ನ ತಾಯಿ. ಚಾಸಾ 10 ನನ್ನ ಅಕ್ಕ. ಚಾಸಾ 11 ಅಣ್ಣನ ಹೆಂಡತಿ. ಚಾಸಾ 12 ನನ್ನ ದೊಡ್ಡಮ್ಮ. ಚಾಸಾ 13 ನನ್ನ ಅಣ್ಣ. ಚಾಸಾ 14 ಅಣ್ಣನ ಹೆಂಡತಿ. ಚಾಸಾ 15 ಅಣ್ಣನ ಹೆಂಡತಿ. ದಿನಾಂಕ 09.02.2022 ರಂದು ರಾತ್ರಿ ಯಲ್ಲಮ್ಮನಗುಡ್ಡದಿಂದ ರಾತ್ರಿ 08.00 ಗಂಟೆಗೆ ಬಿಟ್ಟು ನರಗುಂದಕ್ಕೆ 09.00 ಗಂಟೆಗೆ ಬಂದೆವು. ಬಸವೇಶ್ವರ ಸರ್ಕಾಲ ಹತ್ತಿರ ನಮ್ಮ ವಾಹನವನ್ನು ನಿಲ್ಲಿಸಿ ಚಹಾ ಕುಡಿಯಲು ಹೋದೆವು. ನನ್ನ ತಂದೆಯಾದ ಶಿವನಪ್ಪ ಇವರು ರೋಡನ್ನು ದಾಟಿ ಸ್ವಲ್ಪ ಮುಂದೆ ಹೋದರು. ಆಗ ಆರೋಪಿತನು ವೇಗವಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಬಂದು ನನ್ನ ತಂದೆಯವರಿಗೆ ಡಿಕ್ಕಿಪಡಿಸಿರುತ್ತಾನೆ. ಆಗ ನನ್ನ ತಂದೆಗೆ ಎಡಗೈ ಎಲಬು ಮುರಿದಿದ್ದು ಮತ್ತು ಅವರ ತಲೆಗೆ ರಕ್ತಗಾಯವಾಗಿತ್ತು. ಆಗ ನಮ್ಮ ತಂದೆಯವರನ್ನು ಕರೆದುಕೊಂಡು ನರಗುಂದ ಸರ್ಕಾರಿ ಆಸ್ಪತ್ರೆಗೆ ಬಂದು ತೋರಿಸಿದಾಗ ಅವರನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದರು. ಆಗ ನಾನು ಅವರನ್ನು ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಚಿಕಿತ್ಸೆ ಫಲಕಾರಿಯಾಗದೆ ಅವರು ಅದೇ ದಿನದಂದು ರಾತ್ರಿ 12.15 ಗಂಟೆಗೆ ಮರಣ ಹೊಂದಿದರು. ನಂತರ ನಾನು ಮರುದಿನ ನರಗುಂದಕ್ಕೆ ಬಂದು ಆರೋಪಿತನ ವಿರುದ್ಧ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನುನಿಪಿ 1(ಎ) ಎಂದು ಗುರುತಿಸಲಾಯಿತು. ಆರೋಪಿತನ ಚಾಲಾಯಿಸುತ್ತಿದ್ದ ಹಿರೋ

ಕಂಪನಿಯ ಎಚ್ ಎಫ್ ಡಿಲಕ್ಸ ವಾಹನವಾಗಿದ್ದು ಅದರ ನಂ.ಕೆಎ-26-ಇಡಿ-6742 ಆಗಿರುತ್ತದೆ. ನಾನು ದೂರನ್ನು ನೀಡಿದ ನಂತರ ಪೊಲೀಸರು ಅಪಘಾತ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯ ಕಾಲದಲ್ಲಿ ಘಟನಾ ಜಾಗೆಯನ್ನು ನಾನೇ ತೋರಿಸಿರುತ್ತೇನೆ. ಸಾಕ್ಷಿಗೆ ಅಪಘಾತ ಜಾಗೆ ಪಂಚನಾಮಾ ಜಾಗೆಯ ಭಾವಚಿತ್ರವನ್ನು ತೋರಿಸಿದ್ದು ಅದನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾಹನ ಜಪ್ತ ಪಂಚನಾಮೆಯ ಕಾಲಕ್ಕೆ ತೆಗೆದ ಭಾವಚಿತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾನೆ. ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಮರು ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತಾರೆ. ಈ ನ್ಯಾಯಾಲಯದಲ್ಲಿರುವ ಆರೋಪಿತನೆ ಅಪಘಾತಪಡಿಸಿದ ವ್ಯಕ್ತಿಯಾಗಿರುತ್ತಾನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಬಿ ಕೆ ವಕೀಲರಿಂದ</u>**

ನಾನು ಯಲ್ಲಮ್ಮನಗುಡ್ಡಕ್ಕೆ ಎರಡು ವಾಹನಗಳಲ್ಲಿ ಹೋಗಿರುತ್ತೇವೆ. ನಮ್ಮದು ಒಂದು ಹಾಗೂ ನಮ್ಮ ದೊಡ್ಡಪ್ಪನವರುದು. ನಾವು ಎರಡು ಕ್ರುಷರ ವಾಹನಗಳಲ್ಲಿ ಹೋಗಿರುತ್ತೇವೆ. ಸದರಿ ವಾಹನಗಳ ನಂಬರ ನನಗೆ ಗೊತ್ತಿಲ್ಲ. ನಾವು ಯಲ್ಲಮ್ಮಗುಡ್ಡದಲ್ಲಿ ಎರಡು ದಿನ ಇದ್ದೇವು. **07** ಮತ್ತು **8** ನೇ ತಾರೀಕ ಇದ್ದು ಮತ್ತು **9** ನೇ ತಾರೀಕ ವಾಪಸ್ಸು ಬಂದಿರುತ್ತೇವೆ. ನಾವು ಗುಡ್ಡದಲ್ಲಿ ಟೆಂಟ ಹಾಕಿ ಇದ್ದೇವು. ಎರಡು ದಿನಗಳ ಕಾಲ ಟೆಂಟ ಹಾಕಿ ಗುಡ್ಡದಲ್ಲಿ ಇದ್ದರಿಂದ ನಮಗೆ ಸರಿಯಾಗಿ ನಿದ್ದೆ ಆಗಿರುವುದ್ಲಿ ಹಾಗೂ ವಿಶ್ರಾಂತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಬಸವೇಶ್ವರ ಸರ್ಕಲ ಇರುವ ರಸ್ತೆಯು ರಾಷ್ಟ್ರಿಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಅಡ್ಡಾಡುತ್ತೆವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೋಗಲಿಕ್ಕೆ ಒಂದು ದಾರಿ ಮತ್ತು ಬರಲಿಕ್ಕೆ ಒಂದು ದಾರಿ ಇರುತ್ತದೆ ಎಂದರೆ ಸರಿ. ಬಸವೇಶ್ವರ ಸರ್ಕಲ ಹತ್ತಿರ ನರಗುಂದ ಊರಲ್ಲಿ ಹೋಗಲಿಕ್ಕೆ ಒಂದು ದಾರಿ ಮತ್ತು ಪೂರ್ವಕ್ಕೆ ವಿವೇಕಾನಂದ ನಗರಕ್ಕೆ ಹೋಗುವ ಮತ್ತೊಂದು ದಾರಿ ಇರುತ್ತದೆ ಎಂದರೆ ಸರಿ. ವಿವೇಕಾನಂದ ನಗರಕ್ಕೆ ಹೋಗುವ ದಾರಿಯು ನಾವು ಟೀ ಕುಡಿಯಲು ಹೋಗಿದ್ದ ದಾರಿಗೆ ಹತ್ತಿಕೊಂಡು ಇರುತ್ತದೆ ಎಂದರೆ ಸರಿ. ನಾನು ಆರೋಪಿಯನ್ನು ಪೊಲೀಸ ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿ. ಅಪಘಾವಾತ ದಿನದಂದು ನಮ್ಮ ವಾಹನದಲ್ಲಿ ನಾವು **4** ಜನ ಇದ್ದೇವು ಮತ್ತೊಂದು ವಾಹನದಲ್ಲಿ ಇನ್ನೂ **4** ಜನ ಇದ್ದರು ಒಟ್ಟು **8** ಜನ ಚಹಾ ಕುಡಿಯಲು ಇಳಿದಿದ್ದೇವು. ಬಸವೇಶ್ವರ ಸರ್ಕಲದಿಂದ ಟೀ ಅಂಗಡಿಗೆ ಹೋಗಬೇಕೆಂದರೆ ಒಂದು ದಾರಿಯನ್ನು ದಾಟಿ ಮತ್ತೊಂದು ರಸ್ತೆಯನ್ನು ದಾಟಿದ ನಂತರ ಟೀ

ಅಂಗಡಿ ಬರುತ್ತದೆ ಎಂದರೆ ಸರಿ. ನನ್ನ ತಂದೆಗೆ ಅಪಘಾತವಾದಾಗ ನನ್ನ ತಂದೆಯು ಮುಂದೆ ಇದ್ದರು ನಾನು ಅವರ ಹಿಂದೆ ಇದ್ದೇನು. ಬಸವೇಶ್ವರ ಸರ್ಕಲದಿಂದ **100** ಮೀಟರ ಅಂತರದಲ್ಲಿ ಸರ್ವಜ್ಞ ಸರ್ಕಲ ಬರುತ್ತದೆ ಎಂದರೆ ಸರಿ. ಸರ್ವಜ್ಞ ಸರ್ಕಲ ದಾಟಿದ ನಂತರ ಪೊಲೀಸ ಠಾಣೆ ಬರುತ್ತದೆ ಎಂದರೆ ಸರಿ. ಈ ಹಂತದಲ್ಲಿ ಅಲ್ಲಲ್ಲಿ ವೇಗ ಬೇಕ್ರರಗಳು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ತುಂಬಾ ವಾಹನಗಳು ಇದ್ದವು ಎಂದರೆ ಸಾಕ್ಷಿಯು ನಾವು ಬಂದ ಸಮಯದಲ್ಲಿ ಬಹಳಷ್ಟು ವಾಹನಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಅಂದಾಜು **50-60** ಜನ ಟೀ ಅಂಗಡಿಯ ಆಜುಬಾಜು ಇದ್ದರು. ಅಲ್ಲಿ ಎಷ್ಟು ವಾಹನಗಳು ಇದ್ದವು ಎಂದು ನನಗೆ ಗೊತ್ತಿಲ್ಲ ಆದರೆ ರಸ್ತೆಯ ಬದಿಯಲ್ಲಿ ನಿಂತುಕೊಂಡಿದ್ದವು. ಸದರಿ ರಸ್ತೆಯಲ್ಲಿ ವೇಗ ಬೇಕ್ರರಗಳು ಇರುವುದರಿಂದ ವಾಹನಗಳು ವೇಗವಾಗಿ ಬರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತನು ವೇಗವಾಗಿ ಬಂದಿರುತ್ತಾನೆ ಎಂದು ನುಡಿಯುತ್ತಾರೆ. ರಸ್ತೆಯಲ್ಲಿ ಅಕ್ಕಪಕ್ಕದಲ್ಲಿ ಜನರು ಹಾಗೂ ವಾಹನ ಇರುವುದರಿಂದ ವೇಗವಾಗಿ ವಾಹನವನ್ನು ಚಲಾಯಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ನನ್ನ ತಂದೆಗೆ ರಸ್ತೆಯನ್ನು ದಾಟಿ ಹೋಗುವುದು ಬೇಡ ಎಂದು ನಾನು ಹೇಳಿರುವುದಿಲ್ಲ. ಹುಷರಾಗಿ ಹೇಳಿರುತ್ತೇನೆ. ನನ್ನ ತಂದೆಯು ನನ್ನಿಂದ ಸ್ವಲ್ಪ ದೂರದಲ್ಲಿಯೇ ಇದ್ದರು. ನನ್ನ ತಂದೆಯ ನನ್ನ ಅಣ್ಣ ಇದ್ದನು. ನನ್ನ ತಂದೆಯ ಹಿಂದೆ ಇನ್ನೂ ಇಬ್ಬರು ಇದ್ದರು. ಅವರ ಹೆಸರು ಸಿದ್ದಪ್ಪ ನೀಲಕೇರಿ ಹಾಗೂ ಹನಮಪ್ಪ ನೀಲಕೇರಿ ಇದ್ದರು ಅವರ ಪಕ್ಕದಲ್ಲಿ ನಾನು ಇದ್ದೇನು. ನಾನು ಹಿಂದೆ ಇದ್ದರಿಂದ ನನಗೆ ಅಪಘಾತವಾಗಿದ್ದು ಕಂಡಿರುವುದಿಲ್ಲ ಎಂದರೆ ಸರಿ. ಆರೋಪಿತನು ಅತೀ ವೇಗವಾಗಿ ಬಂದು ನನ್ನ ತಂದೆಗೆ ಡಿಕ್ಕಿಪಡಿಸಿರುತ್ತಾನೆ ಎಂದು ಹೇಳಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ನಾನು ಅಪಘಾತವಾದ **10** ನಿಮಿಷದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು **20** ನಿಮಿಷಗಳ ಕಾಲ ಇದ್ದೇವು. ನಾವು ಹುಬ್ಬಳ್ಳಿಗೆ ಅಂಬ್ಯುಲನ್ಸದಲ್ಲಿ ಹೋಗಿದ್ದರಿಂದ ನಾನು ಸಮಯವನ್ನು ನೋಡಿರುವುದಿಲ್ಲ. ಪಿರ್ಯಾದಿಯನ್ನು ನಾನೇ ಬರೆದಿರುತ್ತೇನೆ. ಪಿರ್ಯಾದಿಯನ್ನು ನಾನು ಪೊಲೀಸ ಠಾಣೆಯಲ್ಲಿ ಕುಳಿತುಕೊಂಡು ಬರೆದಿರುತ್ತೇನೆ. ದೂರನ್ನು ಪೊಲೀಸರು ಬರೆಯಲು ಹೇಳಿದರು ನಾನು ಬರೆದಿರುತ್ತೇನೆ. ನಾನು ಪೊಲೀಸ ಠಾಣೆಗೆ ಹೋಗಿ ದೂರನ್ನು ಕೊಟ್ಟಾಗ ಬೆಳ್ಳಿಗೆ **10** ಗಂಟೆ ಆಗಿರುತ್ತದೆ. ಮರು ಹೇಳಿಕೆಯನ್ನು ನಾನು ಪೊಲೀಸರಿಗೆ ಅದೇ ದಿನದಂದು ನೀಡಿರುತ್ತೇನೆ. ಮರು ಹೇಳಿಕೆಯಲ್ಲಿ ಏನು ಬರೆದಿರುತ್ತದೆ ಎಂದರೆ ಸಾಕ್ಷಿಯು ಇಂತಹ ವ್ಯಕ್ತಿ ಬಂದು ಅಪಘಾತಪಡಿಸಿರುತ್ತಾನೆ ಎಂದು ನನಗೆ ತೋರಿಸಿರುವ ಬಗ್ಗೆ ಹೇಳಿರುತ್ತಾರೆ. ಪಂಚಾನಾಮೆ ಮಾಡಲು ಪಿರ್ಯಾದಿ ಕೊಟ್ಟ ಮರು ದಿನ ಮಧ್ಯಾಹ್ನ **1.00** ಗಂಟಗೆ

ಹೋಗಿರುತ್ತೇನೆ. ಪಂಚನಾಮೆಯನ್ನು ಸುಮಾರು **10-20** ನಿಮಿಷ ಕಾಲ ಮಾಡಿರುತ್ತಾರೆ. ಪಂಚನಾಮೆಯನ್ನು ಪೊಲೀಸರು ಬರೆದಿರುವುದು ನಾನು ನೋಡಿರುವುದಿಲ್ಲ. ನಾನು ಸ್ಥಳದಲಿಲದ್ದಾಗ ಪೊಲೀಸರು ಪಂಚನಾಮೆಯನ್ನು ಬರೆದುಕೊಳ್ಳುತ್ತಿದ್ದರು ಅದರಲ್ಲಿ ಪಂಚನಾಮೆಯನ್ನು ಬರೆದಿರುತ್ತಾರೆ. ನಮ್ಮ ತಂದೆಗೆ ಅಪಘಾತವಾಗಿರುವುದಕ್ಕೆ ಪರಿಹಾರ ಹಣವನ್ನು ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಅದರ ಹಣ ಇನ್ನೂ ಬಂದಿರುವುದಿಲ್ಲ. ಸದರಿ ಪರಿಹಾರ ಹಣದ ಅರ್ಜಿಗೆ ಅನೂಕೂಲವಾಗಬೇಕಂದು ಆರೋಪಿತನು ಯಾವುದೆ ತಪ್ಪು ಮಾಡದಿದ್ದರೂ ಆರೋಪಿತನು ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ ದಿನದಂದೆ ಮೋಟರ ಸೈಕಲನ್ನು ಜಪ್ತ ಮಾಡಿರುತ್ತಾರೆ. ಮೋಟರ ಸೈಕಲನ್ನು ಮಧ್ಯಾಹ್ನ **12.30** ರಿಂದ **01.00** ಗಂಟೆಯ ಅವಧಿಯಲ್ಲಿ ವಶಪಡಿಸಿಕೂಂಡಿರುತ್ತಾರೆ. ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ, ವಾಹನವನ್ನು ಜಪ್ತ ಪಡಿಸಿಕೊಂಡಿರುತ್ತಾರೆ, ನಾನು ಘಟನಾ ಜಾಗೆಯನ್ನು ತೋರಿಸಿರುತ್ತಾರೆ ಹಾಗೂ ದೂರನ್ನು ನಾನೇ ಬರೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **1** ನ್ನು ನಾನೇ ಬರೆದಿರುತ್ತೇನೆ ಅದರಲ್ಲಿರುವ ಬರವಣಿಗೆಯು ನನ್ನಾದಾಗಿರುತ್ತದೆ . ಸಾಕ್ಷಿಗೆ ನಿಪಿ **1** ನ್ನು ತೋರಿಸಿ ಅದರಲ್ಲಿ ದಸ್ತೂರ ಆದ ಬಿಡಕಿ ಎನ್ನುವರ ಸಹಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದೂರನ್ನು ಅವರೆ ಬರೆದಿರುತ್ತಾರೆ ಎಂದರೆ ಸರಿ. ಅವರು ಊರಲ್ಲಿ ಕೆಲಸ ಮಾಡುತ್ತಾರೆ. ಅವರು ನಿಪಿ **1** ನ್ನು ಪೊಲೀಸ ಠಾಣೆಯಲ್ಲಿ ಬರೆದಿರುತ್ತಾರೆ. ನಿಪಿ **1** ನ್ನು ನಾನು ಠಾಣೆಯಲ್ಲಿ ಬರೆದುಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ನಾನೇ ಠಾಣೆಯಲ್ಲಿ ಕೂಡಿಸಿ ದೂರನ್ನು ಹೇಳಿ ಅವರ ಕೈಯಲ್ಲಿ ಬರೆಸಿಕೊಟ್ಟಿರುತ್ತೇನೆ. ಬಿಡಕಿ ಅವರು ನಿಪಿ **1** ರಲ್ಲಿ ಏನೂ ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದ್ದನೆ ಅವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣಕ್ಕೆ ಅನುಕೂಲವಾಗಬೇಕೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

**ಜೆ ಎಂ ಎಫ್ ಸಿ ನರಗುಂದ**